## ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 395 ವೆಚ್ಚ-12/2023

ಕರ್ನಾಟಕ ಸರ್ಕಾರದ ಸಚಿವಾಲಯ

ವಿಧಾನ ಸೌಧ

ಬೆಂಗಳೂರು, ದಿನಾಂಕ:24.07.2023

## ಸುತ್ತೋಲೆ

ವಿಷಯ : ಕಾಮಗಾರಿ ಅಂದಾಜುಗಳ ತಯಾರಿ ಮತ್ತು ಟೆಂಡರುಗಳನ್ನು ಆಹ್ವಾನಿಸುವಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು.

ಉಲ್ಲೇಖ : ಸರ್ಕಾರದ ಆದೇಶ ಸಂ.ಆಇ 127 ವೆಚ್ಚ-12/2023, ದಿನಾಂಕ:16.05.2023.

*****

1. ರಾಜ್ಯದಲ್ಲಿನ ಟೆಂಡರ್ ಆಹ್ವಾನಿಸುವ ಮತ್ತು ಟೆಂಡರ್ ಅಂಗೀಕರಿಸುವ ಪ್ರಾಧಿಕಾರಗಳು ಪ್ರಸ್ತುತ ಕಾಮಗಾರಿಗಳ ಅಂದಾಜನ್ನು ತಯಾರಿಸುವ ಮತ್ತು ಅವುಗಳ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಿ ಅಂಗೀಕರಿಸುವ ಹಂತಗಳಲ್ಲಿ ಅನುಸರಿಸುವ ಪ್ರಕ್ರಿಯೆಯಲ್ಲಿ ಈ ಕೆಳಕಂಡ ಗಂಭೀರ ನ್ಯೂನತೆಗಳನ್ನು ಗಮನಿಸಲಾಗಿರುತ್ತದೆ:

   i. ಟೆಂಡರ್ ಆಹ್ವಾನಿಸುವ ಪ್ರಾಧಿಕಾರಗಳು ಹಳೆಯ ದರ ಪಟ್ಟಿಗಳ ಆಧಾರದ ಮೇಲೆ ಕಾಮಗಾರಿ ಅಂದಾಜುಗಳನ್ನು ತಯಾರಿಸಿ ಟೆಂಡರುಗಳನ್ನು ಆಹ್ವಾನಿಸಿ, ನಂತರ ಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ಚಾಲ್ತಿ ದರಪಟ್ಟಿಗಳನ್ವಯ ಅಂದಾಜನ್ನು ಇಂದೀಕರಿಸಿ (update) ಟೆಂಡರ್ ಮೌಲ್ಯಮಾಪನ ಮಾಡುತ್ತಿರುವುದು ಮತ್ತು ಪರಿಗಣಿಸುತ್ತಿರುವುದು;

   ii. ಕಾಮಗಾರಿಗಳ ಅಂದಾಜು ಮೊತ್ತವನ್ನು ಮಿತಿಗೊಳಿಸಲು ಅಥವಾ ಕಾಮಗಾರಿ ಅಂದಾಜು ಮೌಲ್ಯವನ್ನು ಆಯಾ ಪ್ರಾಧಿಕಾರದ ಅಧಿಕಾರದ ಪ್ರತ್ಯಾಯೋಜನೆಯ ಹಣಕಾಸಿನ ಮಿತಿಯೊಳಗೆ ತರುವ ಉದ್ದೇಶದಿಂದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅತ್ಯವಶ್ಯಕವಾಗಿ ಬೇಕಾಗಿರುವ ಐಟಂ/ಸೇವೆಗಳನ್ನು ಕೈಬಿಟ್ಟು ಅಥವಾ ಕೈಗೊಳ್ಳಬೇಕಾದ ಕಾಮಗಾರಿಯನ್ನು ಕೃತಕವಾಗಿ ಕಡಿತಗೊಳಿಸಿ/ಅರ್ಧಕ್ಕಿಳಿಸಿ ಟೆಂಡರನ್ನು ಆಹ್ವಾನಿಸಿ ಅಂಗೀಕರಿಸುವುದು ಮತ್ತು ಕೈಬಿಟ್ಟ ಐಟಂ/ಸೇವೆಗಳನ್ನು/ಕಾಮಗಾರಿಯನ್ನು ಹೆಚ್ಚುವರಿ ಐಟಂ/ಸೇವೆಗಳಾಗಿ ಅನುಷ್ಠಾನಗೊಳಿಸಿ, ಪರಿಷ್ಕೃತ ಅಂದಾಜು ಸಿದ್ಧಪಡಿಸಿ ಅನುಮೋದನೆಗಾಗಿ ಸಲ್ಲಿಸುತ್ತಿರುವುದು.

2. ಮೇಲ್ಕಂಡ ಅಂಶಗಳು ಸಂಗ್ರಹಣಾ ನೀತಿ, ನಿಯಮಗಳಿಗೆ ವಿರುದ್ಧವಾಗಿದ್ದು, ಸರ್ಕಾರದ ಮೇಲೆ ಅಧಿಕ ಮೊತ್ತದ ಹಣಕಾಸು ಬದ್ಧತೆಯನ್ನು ಉಂಟು ಮಾಡುವುದಲ್ಲದೆ, ಅನರ್ಹ ಮತ್ತು ಅಗತ್ಯ ಸಾಮರ್ಥ್ಯವಿರದ ಟೆಂಡರುದಾರರು/ ಗುತ್ತಿಗೆದಾರರು ಕಾಮಗಾರಿಯನ್ನು ನಿರ್ವಹಿಸುವಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತಾಪಿತ ಮೇಲ್ಕಂಡ ವಿಷಯಗಳ ಕುರಿತು ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ಮತ್ತು ಟೆಂಡರ್ ಆಹ್ವಾನಿಸುವ ಹಾಗೂ ಅಂಗೀಕಾರ ಪ್ರಾಧಿಕಾರಗಳಿಗೆ ಈ ಕೆಳಗಿನಂತೆ ಕ್ರಮವಹಿಸಲು ಸೂಚಿಸಿದೆ.

i. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ರ ನಿಯಮ 11(2)(c) ರಲ್ಲಿ "In the case of construction tenders, detailed estimates shall be prepared by the competent technical authorities based on the schedule of rates and standard data as revised from time to time" ಎಂದು ತಿಳಿಸಲಾಗಿರುತ್ತದೆ. ಅದರಂತೆ ಕಾಮಗಾರಿ ಅಂದಾಜುಗಳನ್ನು ಕಾಲಕಾಲಕ್ಕೆ ಪರಿಷ್ಕರಿಸಲಾದ, ಚಾಲ್ತಿ ಅನುಸೂಚಿ ದರಗಳನ್ನು ಅಳವಡಿಸಿ ತಯಾರಿಸಿಕೊಂಡು ಟೆಂಡರ್ ಆಹ್ವಾನಿಸಬೇಕಾಗುತ್ತದೆ. ಈ ಬಗ್ಗೆ ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಅಂದಾಜುಗಳನ್ನು ಚಾಲ್ತಿಯಲ್ಲಿರುವ ಪ್ರಕಟಿತ ಏಕರೂಪ ಅನುಸೂಚಿ ದರಗಳ (Current Uniform Schedule of Rates) ಅನ್ವಯವೇ ತಯಾರಿಸತಕ್ಕದ್ದು ಎಂದು ತಿಳಿಸಲಾಗಿರುತ್ತದೆ. ಆದ್ದರಿಂದ ಎಲ್ಲಾ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಗಳು ಇನ್ನು ಮುಂದೆ ಚಾಲ್ತಿಯಲ್ಲಿರುವ ಪ್ರಕಟಿತ ಏಕರೂಪ ಅನುಸೂಚಿ ದರಗಳ ಅನ್ವಯವೇ ಟೆಂಡರ್ ಆಹ್ವಾನಿಸಲು ಕ್ರಮವಹಿಸತಕ್ಕದ್ದು ಮತ್ತು ಈ ರೀತಿ ಕ್ರಮವಹಿಸಿರುವುದನ್ನು ಎಲ್ಲಾ ಟೆಂಡರ್ ಅಂಗೀಕರಿಸುವ ಪ್ರಾಧಿಕಾರಗಳು ಟೆಂಡರ್ ಅನ್ನು ಅಂಗೀಕರಿಸುವ ಮೊದಲು ಕಡ್ಡಾಯವಾಗಿ ಖಚಿತಪಡಿಸಿಕೊಳ್ಳತಕ್ಕದ್ದು.

ii. ಕಾಮಗಾರಿ ಅಂದಾಜುಗಳನ್ನು ತಯಾರಿಸುವ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಅಂದಾಜನ್ನು ಸೀಮಿತಗೊಳಿಸದೆ, ಕಾಮಗಾರಿಯನ್ನು ಪೂರ್ಣಗೊಳಿಸಲು ಅವಶ್ಯಕವಿರುವ ಎಲ್ಲಾ ಐಟಂ/ಸೇವೆಗಳನ್ನು (ಉದಾ: Mechanical, Electrical, Plumbing, Incidental services, Lift, Furnitures and Fixtures, Equipments, Compound wall, etc.,) ಸೇರ್ಪಡೆ ಮಾಡಿಕೊಂಡು ಪೂರ್ಣ ಪ್ರಮಾಣದಲ್ಲಿ ಅಂದಾಜು ತಯಾರಿಸಿ ಆಡಳಿತಾತ್ಮಕ ಅನುಮೋದನೆ ಪಡೆಯತಕ್ಕದ್ದು. ಸಂಬಂಧಪಟ್ಟ ತಾಂತ್ರಿಕ ಮಂಜೂರಾತಿ ಪ್ರಾಧಿಕಾರವು ತಾಂತ್ರಿಕ ಮಂಜೂರಾತಿ ನೀಡುವ ಮೊದಲು ಈ ರೀತಿ ಪೂರ್ಣ ಪ್ರಮಾಣದಲ್ಲಿ ಅಂದಾಜು ತಯಾರಿಸಿರುವುದನ್ನು ಖಚಿತಪಡಿಸಿಕೊಂಡು ತಾಂತ್ರಿಕ ಮಂಜೂರಾತಿ ನೀಡತಕ್ಕದ್ದು. ಅದೇ ರೀತಿ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಮತ್ತು ಅಂಗೀಕಾರ ಪ್ರಾಧಿಕಾರಗಳೂ ಸಹ ಟೆಂಡರ್ ಆಹ್ವಾನಿಸುವ ಮತ್ತು ಅಂಗೀಕರಿಸುವ ಮೊದಲು ಈ ಅಂಶವನ್ನು ಖಚಿತಪಡಿಸಿಕೊಳ್ಳತಕ್ಕದ್ದು.

3. ಮೇಲಿನ ಎಲ್ಲಾ ನಿರ್ದೇಶನಗಳನ್ನು ಸಂಬಂಧಪಟ್ಟ ಎಲ್ಲಾ ಪ್ರಾಧಿಕಾರಗಳು ಕಡ್ಡಾಯವಾಗಿ ಪಾಲಿಸತಕ್ಕದ್ದು. ಮೇಲಿನ ನಿರ್ದೇಶನಗಳ ಮಾರ್ಗಪಲ್ಲಟದಿಂದ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ/ಪರಿಣಾಮವಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ ನಿಯಮಗಳ ಅನುಸಾರ ಗುರುತರ ದಂಡನೆ (Major Penalty)ಗೆ ಶಿಕ್ಷಾರ್ಹರಾಗಬೇಕಾಗುತ್ತದೆ ಎಂಬುದಾಗಿ ತಿಳಿಯಪಡಿಸಿದೆ.

4. ಮೇಲಿನ ಸೂಚನೆಗಳನ್ನು ಸರ್ಕಾರದ ಎಲ್ಲಾ ಇಲಾಖೆಗಳು ಹಾಗೂ ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುವ ನಿಗಮ, ಮಂಡಳಿಗಳು ಮತ್ತು ಸ್ವಾಯತ್ತ ಸಂಸ್ಥೆಗಳು ಕಟ್ಟುನಿಟ್ಟಾಗಿ ಪಾಲಿಸುವುದನ್ನು ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ಖಚಿತಪಡಿಸಿಕೊಳ್ಳತಕ್ಕದ್ದು.

(ಶ್ರೀಕೃಷ್ಣ ಎನ್.ಬುಗಟ್ಯಾಗೋಳ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಜಿ.ಪಂ.)

ಇವರಿಗೆ:

(1) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು
(2) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು
(3) ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು